ESTD : No. JRB/Cell.II/69/Regn-4876/77-78
Date : 09-12-1977

✆:080-26601442

# ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ

THE BANGALORE CITY DIST. CO-OPERATIVE UNION LTD.,
' ಸಹಕಾರ ಭವನ ' ನಂ. 1/3, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಂಗಳೂರು-560 018
E-mail: bcdcu1977@gmail.com

**ಹೆಚ್.ಟಿ. ನಾಗೇಶ್**
ಅಧ್ಯಕ್ಷರು

**ಕೆ.ಎನ್. ಚಾಮರಾಜು**
ಉಪಾಧ್ಯಕ್ಷರು

**ಎಂ. ವೆಂಕಟೇಶ್**
ಖಜಾಂಚಿ

## ಸಹಕಾರ ಕ್ಷೇತ್ರದಿಂದ ಯುವಕರು ನಾಯಕರಾಗಬಹುದು : ಹೆಚ್.ಟಿ. ನಾಗೇಶ್

**ಬೆಂಗಳೂರು :** ದೇಶದ ಆರ್ಥಿಕ ಪ್ರಗತಿಯಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುತ್ತಿರುವ ಸಹಕಾರ ಕ್ಷೇತ್ರ ಇಂದು ಪ್ರತಿಯೊಂದು ವಲಯದಲ್ಲಿ ಸಕ್ರಿಯವಾಗಿ ಪ್ರಗತಿ ಕಂಡಿದೆ. ದೇಶದಲ್ಲಿ ಸಹಕಾರ ಸಂಸ್ಥೆಗಳು ಬೃಹತ್ತಾಗಿ ಬೆಳೆದಿವೆ. ಲಕ್ಷಾಂತರ ಜನರಿಗೆ ಉದ್ಯೋಗವನ್ನು ನೀಡಿವೆ. ಅನೇಕ ರಾಷ್ಟ್ರೀಯ ನಾಯಕರು ಮೂಲತಃ ಸಹಕಾರ ಕ್ಷೇತ್ರದಿಂದ ಬಂದವರಾಗಿದ್ದಾರೆ. ಯುವಕರು ಕೂಡ ಸಹಕಾರ ಕ್ಷೇತ್ರದ ಕುರಿತು ಅರಿತರೆ ಮುಂದಿನ ದಿನಗಳಲ್ಲಿ ಉತ್ತಮ ನಾಯಕರಾಗುವ ಅವಕಾಶವಿದೆ ಎಂದು ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಅಧ್ಯಕ್ಷರಾದ ಹೆಚ್.ಟಿ. ನಾಗೇಶ್ ತಿಳಿಸಿದರು.

ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ, ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ, ಹಾಗೂ ಭಾರತ್ ವಿದ್ಯಾಸಂಸ್ಥೆ ಇವರುಗಳ ಸಂಯುಕ್ತಾಶ್ರಯದಲ್ಲಿ ದಿನಾಂಕ 30-08-2024 ರಂದು ಜಿಲ್ಲಾ ಮಟ್ಟದ ಚರ್ಚಾ ಮತ್ತು ಪ್ರಬಂಧ ಸ್ಪರ್ಧೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡುತ್ತಾ, ಈ ಒಂದು ಉದ್ದೇಶದಿಂದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಹಾಗೂ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಸಹಯೋಗದಲ್ಲಿ ಪ್ರತಿ ವರ್ಷ ವಿದ್ಯಾರ್ಥಿಗಳಿಗೆ ಚರ್ಚಾ ಮತ್ತು ಪ್ರಬಂಧ ಸ್ಪರ್ಧೆಯನ್ನು ಹೊಮ್ಮಿಕೊಳ್ಳಲಾಗುತ್ತಿದೆ. ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸಿ, ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದರು.

ಭಾರತ್ ವಿದ್ಯಾಸಂಸ್ಥೆಯ ಅಧ್ಯಕ್ಷರಾದ ನಿರ್ಮಲ್ ಕುಮಾರ್ ರವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಸಹಕಾರ ಕ್ಷೇತ್ರದ ಪ್ರಗತಿಯಲ್ಲಿ ಯುವಕರು ಹೆಚ್ಚಿನ ಸಂಖ್ಯೆಯಲ್ಲಿ ಕೈಜೋಡಿಸಬೇಕು. ವಿದ್ಯಾರ್ಥಿಗಳನ್ನು ಸಹಕಾರ ಕ್ಷೇತ್ರಕ್ಕೆ ಕರೆತರಲು ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಹಾಗೂ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟಗಳು ಮಾಡುತ್ತಿರುವ ಪ್ರಯತ್ನ ಪ್ರಶಂಸನೀಯ ಎಂದರು.

ಚರ್ಚಾಸ್ಪರ್ಧೆಯ ತೀರ್ಪುಗಾರರಾಗಿ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ನಿವೃತ್ತ ಶಿಕ್ಷಣಾಧಿಕಾರಿಗಳಾದ ಕೆ. ಮಲ್ಲಯ್ಯ, ಬೆಂಗಳೂರು ಕೆ.ಐ.ಸಿ.ಎಂ ತರಬೇತಿ ಸಂಸ್ಥೆಯ ಪ್ರಾಧ್ಯಾಪಕರುಗಳಾದ ಸುರೇಖಾ ಮತ್ತು ಎನ್. ಪೂರ್ಣಿಮಾ ಇವರುಗಳು ಆಗಮಿಸಿದ್ದರು.

ಬೆಂಗಳೂರು ದಕ್ಷಿಣ ಜಿಲ್ಲೆಯ ಪದವಿ ಪೂರ್ವ ಶಿಕ್ಷಣ ಇಲಾಖೆಯ ಸಹಾಯಕ ನಿರ್ದೇಶಕರಾದ ಮಂಜುನಾಥ್ ಎನ್. ರವರು ಮಾತನಾಡಿ, ಸಹಕಾರದ 7 ತತ್ವಗಳ ಬಗ್ಗೆ ಹಾಗೂ ಸಹಕಾರ ಕ್ಷೆತ್ರ ಬೆಳೆದು ಬಂದ ದಾರಿಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡುವುದರ ಜೊತೆಗೆ ಅಲ್ಲಿ ಭಾಗವಹಿಸಿದಂತಹ ಎಲ್ಲಾ ಯುವ ಜನ ವಿದ್ಯಾರ್ಥಿಗಳಿಗೆ ಸಹಕಾರ ಕ್ಷೇತ್ರ ಬಗ್ಗೆ ಅರಿವು ಮೂಡಿಸಿದರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಹಾಗೂ ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ಸತತವಾಗಿ ವರ್ಷಕೊಮ್ಮೆ ಈ

ಸ್ಪರ್ಧೆಯನ್ನು ಆಯೋಜಿಸುವುದರಿಂದ ಬಹಳಷ್ಟು ಯುವಕರಲ್ಲಿ ಸಹಕಾರ ಕ್ಷತ್ರದ ಬಗ್ಗೆ ಅರಿವು ಮೂಡಿಸುವುದು ಬಹಳ ಉತ್ತಮವಾದ ಕೆಲಸ ಎಂದು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ಮುಖ್ಯಕಾರ್ಯನಿರ್ವಹಣಾಧಿಕಾರಿ ಮಂಜುನಾಥ ನಾಗತಾಣ ಸ್ವಾಗತಿಸಿದರು. ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಸಾರ್ವಜನಿಕ ಸಂಪರ್ಕಾಧಿಕಾರಿ ಹಾಗೂ ಸಮನ್ವಯಾಧಿಕಾರಿ ಟಿ.ಎನ್. ಕೇಶವ್ ವಂದಿಸಿದರು. ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟದ ವ್ಯವಸ್ಥಾಪಕರಾದ ನಾಗರಾಜ್ ಹಾಗು ಸಹಕಾರ ಶಿಕ್ಷಕರಾದ ಸಿ.ಎಂ. ಲಕ್ಷ್ಮೀ ಉಪಸ್ಥಿತರಿದ್ದರು. ಜಿಲ್ಲೆಯ ವಿವಿಧ ಪ್ರೌಢಶಾಲೆಯ ಮಕ್ಕಳು ಮತ್ತು ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ಪ್ರಬಂಧ ಮತ್ತು ಚರ್ಚಾಸ್ಪರ್ಧೆಯಲ್ಲಿ ಭಾಗವಹಿಸಿದ್ದರು.

ಚರ್ಚಾ ಸ್ಪರ್ಧೆ ಹಾಗೂ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಿ ಬಹುಮಾನ ಪಡೆದ ವಿದ್ಯಾರ್ಥಿಗಳ ವಿವರ ಕೆಳಕಂಡಂತಿದೆ.

**ಪ್ರಬಂಧ ಸ್ಪರ್ಧೆ :-**

| ಕ್ರ.ಸಂ. | ವಿದ್ಯಾರ್ಥಿಗಳ ಹೆಸರು | ಶಾಲೆ ವಿಳಾಸ | ದೂರವಾಣಿ: |
|---|---|---|---|
| 1 | ಭೂಮಿಕ ಎ.<br>10ನೇ ತರಗತಿ | ಸರ್ಕಾರಿ ಬಾಲಕಿಯರ ಪ್ರೌಡಶಾಲೆ, ಛತ್ರಖಾನೆ, ಚಂದಾಪುರ, ಆನೇಕಲ್ ತಾಲ್ಲೂಕು, ಬೆಂಗಳೂರು | 9738385192 |
| 2. | ನಾಗರತ್ನ ಎ. ಜೋಸ್<br>10ನೇ ತರಗತಿ | ವಿಜಯ ಭಾರತಿ ವಿದ್ಯಾಲಯ ನಂ.517, 8ನೇ ಮೈನ್ ರೋಡ್ ಗಿರಿನಗರ ಬನಶಂಕರಿ 1ನೇ ಹಂತ ಬೆಂಗಳೂರು – 560085 | 9986246838 |
| 3 | ಸೃಜನ ಜೆ.<br>10ನೇ ತರಗತಿ | ಶ್ರೀಮತಿ ಗಂಗಮ್ಮ ಹೊಂಬೇಗೌಡ ಬಾಲಕಿಯರ ಪ್ರೌಢಶಾಲೆ, 9ನೇ ಕ್ರಾಸ್, ಹೊರಾಬೇಗೌಡ ನಗರ, ಬೆಂಗಳೂರು–27 | 99003226108 |

**ಚರ್ಚಾ ಸ್ಪರ್ಧೆ :-**

| ಕ್ರ.ಸಂ. | ವಿದ್ಯಾರ್ಥಿಗಳ ಹೆಸರು | ಕಾಲೇಜು ವಿಳಾಸ | ಮನೆ ವಿಳಾಸ |
|---|---|---|---|
| 1 | ವಿದ್ಯಾಶ್ರೀ ಎಸ್.<br>II PUC<br>ಪ್ರಥಮ ಸ್ಥಾನ<br>9964408568 | ರಾಜಾಜಿನಗರ ಸಂಯುಕ್ತ ಪದವಿ ಪೂರ್ವ ಕಾಲೇಜು 10ನೆ ಮುಖ್ಯ ರಸ್ತೆ 5 ನೇ ಬ್ಲಾಕ್ ಎದುರು ರಾಮಮಂದಿರ ಗ್ರೌಂಡ್ ರಾಜಾಜಿನಗರ–560010<br>8904667547/7892408109 | ನಂ. 18/01, 22ನೇ ಕ್ರಾಸ್ ಕೆ.ಪಿ. ಅಗ್ರಹಾರ ಬುವನೇಶ್ವರಿ ನಗರ ಬೆಂಗಳೂರು – 57 |
| 2. | ಸಂಜನ ಎಸ್.<br>I PUC<br>ದ್ವಿತೀಯ ಸ್ಥಾನ<br>9686254900/7022533735 | ಸರ್ಕಾರಿ ಪದವಿ ಪೂರ್ವ ಕಾಲೇಜು ವಿ.ವಿ.ಐ ಪೋರ್ಟ್ (ಬಾಲಕಿಯರ) ಚಾಮರಾಜಪೇಟೆ, ಕೆ.ಆರ್. ಮಾರ್ಕೆಟ್ ಬೆಂಗಳೂರು–18 | ಶ್ರೀ ಕಾಲಭೈರೇಶ್ವರ ನಿಲಯ ಜಿ. ಹೊಸಳ್ಳಿ ದೊಡ್ಡಗೊಲ್ಲರಹಳ್ಳಿ ಬೆಂಗಳೂರು – 91 |

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಮಂಜುನಾಥ ನಾಗತಾಣ)
ಮುಖ್ಯಕಾರ್ಯನಿರ್ವಹಣಾಧಿಕಾರಿ(ಪ್ರ)


ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ನಿ.,
ಬೆಂಗಳೂರು ನಗರ ಜಿಲ್ಲಾ ಸಹಕಾರ ಒಕ್ಕೂಟ ನಿ.,
ಬಿ.ಇ.ಎಸ್. ವಿದ್ಯಾಸಂಸ್ಥೆ, ಜಯನಗರ, ಬೆಂಗಳೂರು